**ಪಿ ಡಬ್ಲೂ : 1**

ಸಾಕ್ಷಿಗೆ ದಿನಾಂಕಃ **03.11.2025** ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಅರೋಪಿ ಪರಃ ಶ್ರೀ ವಿ.ಎನ್. ವಕೀಲರಿಂದ:**

ನನ್ನ ಪ್ರಮಾಣಪತ್ರದಲ್ಲಿ ನಾನು ವ್ಯವಸಾಯ ವೃತ್ತಿಯನ್ನು ಮಾಡುತ್ತೇನೆಂದು ನಮೂದು ಮಾಡಿಸಿರುವ ಸಂಬಂದವಾಗಿ ಪೂರಕ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ನಾನು 10ನೇ ತರಗತಿಯಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ, ಇಂಗ್ಲೀಷ್ ಗೊತ್ತಿರುವುದಿಲ್ಲ. ನಮ್ಮ ಮನೆಯಲ್ಲಿ ನಾನು, ನನ್ನ ಪತ್ನಿ ಮತ್ತು ಇಬ್ಬರು ಮಕ್ಕಳು ಇರುತ್ತೇವೆ. ನನ್ನ ಇಬ್ಬರು ಮಕ್ಕಳು ಮೊದಲ ಪಿ.ಯು.ಸಿ. ಮತ್ತು 6ನೇ ತರಗತಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ನನ್ನ ಪತ್ನಿಯು ಟೈಲರಿಂಗ್ ಕೆಲಸ ಮಾಡುತ್ತಾರೆ. ನನ್ನ ಮಕ್ಕಳಿಗೆ ಸಂಬಂದವಾಗಿ ನನ್ನ ಅದಾಯ ದೃಡೀಕರಣಪತ್ರವನ್ನು ಮಾಡಿಸಿರುವುದಿಲ್ಲ. ನಾನು ಸಹ ಅದಾಯ ದೃಡೀಕರಣಪತ್ರವನ್ನು ಅವಶ್ಯಕತೆ ಇಲ್ಲದ ಕಾರಣ ಮಾಡಿಸಿರುವುದಿಲ್ಲ. ನಾನು ಎ.ಪಿ.ಎಲ್. ಪಡಿತರ ಚೀಟಿಯನ್ನು ಹೊಂದಿರುತ್ತೇನೆ. ಸದರಿ ದಾಖಲೆಯನ್ನು ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ. ನಾನು ಅದಾಯ ತೆರಿಗೆಯನ್ನು ಪಾವತಿ ಮಾಡುವುದಿಲ್ಲ. ನಾನು ಬಿ.ಪಿ.ಎಲ್. ಪಡಿತರ ಚೀಟಿಯನ್ನು ಹೊಂದಿದ್ದರೂ ಸಹ ಎ.ಪಿ.ಎಲ್. ಪಡಿತರ ಚೀಟಿ ಹೊಂದಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಪತ್ನಿಯು ಟೈಲರಿಂಗ್ ಮಾಡುತ್ತಿರುವ ಬಗ್ಗೆ ಪರವಾನಿಗೆ ಪಡೆದಿರುವುದಿಲ್ಲ.

2) ನಾನು 4 ಲಕ್ಷ ರೂಪಾಯಿ ಸಾಲ ನೀಡುವ ಸಾಮರ್ಥ್ಯವನ್ನು ಹೊಂದಿರುತ್ತೇನೆ ಎಂದು ದಾಖಲೆ ಹಾಜರುಪಡಿಸಿರುವುದಿಲ್ಲ. ನಾನು ಹಿಟ್ಟನಹಳ್ಳಿ ಕೊಪ್ಪಲಿನ ಕೆನರಾ ಬ್ಯಾಂಕಿನಲ್ಲಿ ಖಾತೆ ಹೊಂದಿರುತ್ತೇನೆ. 2022 ರಿಂದ ಇಲ್ಲಿಯವರೆಗೆ ನನ್ನ ಬ್ಯಾಂಕಿನಲ್ಲಿ ಖಾತೆ ವ್ಯವಹಾರ ಅಗಿರುವ ಬಗ್ಗೆ ದಾಖಲೆ ಹಾಜರುಪಡಿಸಿರುವುದಿಲ್ಲ. ದಿನಾಂಕ 14.03.2022 ರಂದು ನನ್ನ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲದ ಕಾರಣ ನಾನು ನನ್ನ ಬ್ಯಾಂಕಿನ ಖಾತೆಯ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ಹೆಸರಿನಲ್ಲಿ 2 ಎಕರೆ ಅಸ್ತಿ ಇರುತ್ತದೆ. ಸದರಿ ಜಮೀನುಗಳ ಸರ್ವೆ ನಂ.427, 368, 190 ಮತ್ತು 251 ಅಗಿರುತ್ತದೆ. ಸದರಿ ಸ್ವತ್ತುಗಳ ಪಹಣಿಗಳು ನನ್ನ ಹೆಸರಿನಲ್ಲಿ ಇಲ್ಲದ ಕಾರಣ ನಾನು ಪಹಣಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ.190 ರಲ್ಲಿ ನನ್ನ ಹೆಸರಿಗೆ 5 ಗುಂಟೆ ಜಮೀನು, ಸರ್ವೆ

ನಂ.190/13ಬಿ ರಲ್ಲಿ ನನ್ನ ಹೆಸರಿಗೆ 3 ಗುಂಟೆ ಜಮೀನು, ಸರ್ವೆ ನಂ.242 ರಲ್ಲಿ ನನ್ನ ಹೆಸರಿಗೆ 1.08 ಗುಂಟೆ ಜಮೀನು, ಸರ್ವೆ ನಂ.355/1ಬಿ ರಲ್ಲಿ ನನ್ನ ಹೆಸರಿಗೆ 16 ಗುಂಟೆ ಜಮೀನು ಇರುತ್ತದೆ ಎಂದರೆ ಸರಿ. ಸದರಿ ಜಮೀನುಗಳ ಪಹಣಿಗಳನ್ನು ನೋಡಿ ಒಪ್ಪಿಕೊಂಡ ಕಾರಣ ಸದರಿ ಪಹಣಿಗಳನ್ನು ನಿಡಿ-1 ರಿಂದ ನಿಡಿ-4 ಎಂದು ಗುರುತಿಸಲಾಯಿತು. ಸದರಿ ಸ್ವತ್ತುಗಳನ್ನು ಹೊರತುಪಡಿಸಿ ಬೇರೆ ಸ್ವತ್ತುಗಳು ಇರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಕಡಿಮೆ ಅಸ್ತಿ ಇರುವುದರಿಂದ ನಾನು ಪಹಣಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಿಡಿ-1 ರಿಂದ ನಿಡಿ-4 ರ ಸ್ವತ್ತುಗಳ ಮೇಲೆ ನಾನು ಸೊಸೈಟಿಯಲ್ಲಿ ಸಾಲ ಪಡೆದಿರುತ್ತೇನೆ ಎಂದರೆ ಸರಿ. ನಾನೇ ಸಾಲಿಗ ಅಗಿ ಅರೋಪಿಗೆ ಹಣ ನೀಡಿರುತ್ತೇನೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ-1 ರಿಂದ 4 ರ ಸ್ವತ್ತುಗಳಲ್ಲಿ ನನಗೆ 3 ವರುಷಗಳಿಗೆ 10 ಲಕ್ಷ ರೂಪಾಯಿ ಅದಾಯ ಇರುತ್ತದೆ. ನಿಡಿ-1 ರಿಂದ 4 ರಲ್ಲಿ ಬೆಳೆಯ ನಮೂನೆಯನ್ನು ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಸದರಿ ಸ್ವತ್ತುಗಳಲ್ಲಿ ಯಾವುದೇ ಬೆಳೆಯನ್ನು ಬೆಳೆಯದೇ ಇದ್ದರೂ ಸಾಧ್ಯವಾದರೇ ಅರೋಪಿಗೆ ತೊಂದರೆ ಕೊಡಲು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೊಂದಿರುವ ವರಮಾನವು ನನ್ನ ಕುಟುಂಬದ ವ್ಯವಹರಣೆಗೆ ಸಾಧ್ಯವಾಗುವುದಿಲ್ಲ ಎಂದರೆ ಸರಿಯಲ್ಲ. ಆ ರೀತಿ ನಾನು ಅದಾಯವನ್ನು ಹೊಂದಿದ್ದರೇ ಸೊಸೈಟಿಯಲ್ಲಿ ಸಾಲವನ್ನು ಪಡೆಯುವ ಪ್ರಮೇಯ ಬರುತ್ತಿರಲಿಲ್ಲ ಎಂದರೆ ಮನೆ ಕಟ್ಟಿಸಲು ಸಾಲ ಪಡೆದಿದ್ದೆ. ನಾನು ಮನೆಯನ್ನು ಕಟ್ಟಿಸದೇ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3) ಅರೋಪಿಯು ನನಗೆ 15 ವರುಷಗಳಿಂದ ಪರಿಚಯವಿರುತ್ತಾರೆ. ಅವರು ಕೆ.ಎಂ.ದೊಡ್ಡಿಯಲ್ಲಿ ಫೀಲ್ಡ ಮ್ಯಾನ್ ಅಗಿ ಸಕ್ಕರೆ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದಾರೆ, ಅವರು ಎಷ್ಟು ವರುಷಗಳಿಂದ ಸದರಿ ಉದ್ಯೋಗದಲ್ಲಿ ಇರುತ್ತಾರೆ ಎಂದರೆ ಗೊತ್ತಿರುವುದಿಲ್ಲ. ಅವರಿಗೆ ಎಷ್ಟು ವೇತನ ಬರುತ್ತದೆ ಎಂದು ಗೊತ್ತಿರುವುದಿಲ್ಲ. ನಾನು ಸಾಲ ನೀಡಿರುತ್ತೇನೆ ಎಂದು ಹೇಳುವ ಪೂರ್ವದಲ್ಲಿ ಅರೋಪಿಯ ವ್ಯವಹಾರದ ಬಗ್ಗೆ ತಿಳಿದುಕೊಂಡಿರುವುದಿಲ್ಲ. ಅವರಿಗೆ ಎಷ್ಟು ಜನ ಮಕ್ಕಳು ಇರುತ್ತಾರೆ ಮತ್ತು ಎಷ್ಟು ಅಸ್ತಿ ಇದೆ ಎಂದು ಗೊತ್ತಿರುವುದಿಲ್ಲ. ನಮ್ಮ ಮನೆಯಲ್ಲಿ ಯಾವುದೇ ಕಾರ್ಯಕ್ರಮ ಮಾಡದೇ ಇರುವ ಕಾರಣ ಅವರು ಭಾಗವಹಿಸಿರುವುದಿಲ್ಲ. ಅವರ ಮನೆಯಲ್ಲಿಯೂ ಸಹ ಯಾವುದೇ ಕಾರ್ಯಕ್ರಮ ಅಗಿರುವುದಿಲ್ಲ, ಹಬ್ಬಕ್ಕೆ ಮಾತ್ರ ಹೋಗುತ್ತೇನೆ. ಅರೋಪಿಯ ಮನೆಯ ಪಕ್ಕದಲ್ಲಿ ನನ್ನ ದೊಡ್ಡಪ್ಪನ ಮಗಳ ಮನೆ ಇದ್ದು, ಅದ್ದರಿಂದ ನಾನು ಅಲ್ಲಿಗೆ ಹೋಗುತ್ತಿದ್ದ ಕಾರಣ ಅರೋಪಿಯ ಪರಿಚಯವಿರುತ್ತದೆ. ಅರೋಪಿಯ ಮನೆಯ ಉತ್ತರಕ್ಕೆ ನನ್ನ ದೊಡ್ಡಮ್ಮನ ಮಗಳ ಮನೆ ಇರುತ್ತದೆ. ಅವರ ಹೆಸರು ಗೌರಮ್ಮ. ಅವರ ಪತಿಯ ಹೆಸರು ಕೃಷ್ಣೇಗೌಡ. ನಾನು ರಾವಂದೂರು ಗ್ರಾಮವನ್ನು

ನೋಡದೇ ಇದ್ದರು ಅವರಿಗೂ ಮತ್ತು ನನಗೂ ಯಾವುದೇ ಸಂಬಂದವಿಲ್ಲದೇ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4) ದಿನಾಂಕ 14.03.2022 ರಂದು ಅರೋಪಿಯು ಎಲ್ಲಿ ಕೆಲಸ ಮಾಡುತ್ತಿದ್ದರು ಎಂದು ನನಗೆ ನೆನಪಿರುವುದಿಲ್ಲ. ಅದು ಯಾವ ವಾರ ಅಗಿರುತ್ತದೆ ಎಂದು ನೆನಪಿರುವುದಿಲ್ಲ. ಅರೋಪಿಯು 3 ಪಾಳೆಯದಲ್ಲಿ ಕೆಲಸ ಮಾಡುತ್ತಿದ್ದು, ಕೆಲಸದ ಸಮಯ ಗೊತ್ತಿರುವುದಿಲ್ಲ. ಬೆಳಿಗ್ಗೆ 7.00 ಗಂಟೆಗೆ ಅರೋಪಿಯೂ ನಮ್ಮ ಮನೆಗೆ ಸಾಲ ಪಡೆಯಲು ಒಬ್ಬರೇ ಬಂದಿದ್ದರು. ನಿಪಿ-1 ನ್ನು ಹೊರತುಪಡಿಸಿ ಅರೋಪಿಯಿಂದ ಬೇರೆ ದಾಖಲೆ ಬರೆಸಿರುವುದಿಲ್ಲ. ನಾನು ಸಾಲ ನೀಡಿರುತ್ತೇನೆ ಎಂದು ಹೇಳುವ ಕಾಲಕ್ಕೆ ನಾನು ಮತ್ತು ಅರೋಪಿ ಮಾತ್ರ ಇದ್ದೇವು. ನಾನು ಅದನ್ನು ಸುಳ್ಳಾಗಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 14.05.2022 ರಂದು ಅರೋಪಿಯನ್ನು ಅವರ ಮನೆಯಲ್ಲಿ ಬೆಳಿಗ್ಗೆ 8.00 ಗಂಟೆಗೆ ಬೇಟಿ ಮಾಡಿರುತ್ತೇನೆ. ನಾನು ಸದರಿಯವರ ಮನೆಯ ಹೊರಗಡೆ ಬೇಟಿ ಮಾಡಿದ್ದು, ಸದರಿ ಕಾಲಕ್ಕೆ ನಾನು ಮತ್ತು ಅರೋಪಿ ಇದ್ದೇವು. ಸದರಿ ಕಾಲಕ್ಕೆ ನಾನು ಗೌರಮ್ಮ ಮತ್ತು ಕೃಷ್ಣೇಗೌಡರನ್ನು ಅರೋಪಿಯ ಮನೆಗೆ ಕರೆದುಕೊಂಡು ಹೋಗಿರುವುದಿಲ್ಲ. ನಾನು ಮೇಲೆ ಹೇಳಿದ ಸಮಯವನ್ನು ನೋಟೀಸಿನಲ್ಲಿ ಮತ್ತು ದೂರಿನಲ್ಲಿ ತಿಳಿಸಿರುವುದಿಲ್ಲ.

5) ನಿಪಿ-1 ನ್ನು ಅರೋಪಿಯು ಅವರ ಮನೆಯ ಹೊರಗಡೆ ನೀಡಿರುತ್ತಾರೆ. ನಾನು ಅರೋಪಿಯನ್ನು ಸ್ನೇಹಿತರೆಂದು ಹೇಳಿದ್ದು, ಆ ಸಂಬಂದವಾಗಿ ಅವರು ನನ್ನನ್ನು ಅವರ ಮನೆಯ ಒಳಗಡೆ ಕರೆಸಿ ಸತ್ಕಾರ ಮಾಡಿ ಚೆಕ್ಕು ನೀಡಿರುವುದಿಲ್ಲ. ನಿಪಿ-1 ನ್ನು ಯಾರು ಭರ್ತಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ, ಅದರೆ ನನ್ನ ಮುಂದೆ ಸಹಿ ಮಾಡಿರುತ್ತಾರೆ. ಆರೋಪಿಯು ಸಹಿಯನ್ನು ಇಂಗ್ಲೀಷ್ ನಲ್ಲಿ ಮಾಡಿರುತ್ತಾರೆ. ಚೆಕ್ಕನ್ನು ಕನ್ನಡದಲ್ಲಿ ಭರ್ತಿ ಮಾಡಿರುತ್ತಾರೆ. ಇಂಗ್ಲೀಷ್ ನಲ್ಲಿ ಭರ್ತಿ ಮಾಡಿಕೊಡುವಂತೆ ಕೇಳಲು ನನಗೆ ತೊಂದರೆ ಇರಲಿಲ್ಲ. ನಿಪಿ-1ರ ಚೆಕ್ಕಿನ ಹಾಳೆಯಲ್ಲಿ ನಮೂದು ಮಾಡಿರುವ ಶೀರ್ಷಿಕೆ ಮತ್ತು ಚೆಕ್ಕಿನಲ್ಲಿ ನಮೂದು ಮಾಡಿರುವ ಬರವಣಿಗೆಗಳು ಒಂದೇ ಎಂದರೆ ಸರಿಯಲ್ಲ. ಎರಡು ಬರವಣಿಗೆಗಳು ಒಂದೇ ಅಗಿದ್ದರೂ ಸಹ ಹೇಗಾದರೂ ಮಾಡಿ ಅರೋಪಿಯಿಂದ ಹಣ ಪಡೆಯಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅರೋಪಿಯು ಚಾಮ ಶುಗರ್ ಕಾರ್ಖಾನೆಯ ನೌಕರ ಅದ ಕಾರಣ ಹೇಗಾದರೂ ಮಾಡಿ ಹಣ ಕೊಡುತ್ತಾರೆಂದು ಈ ಸುಳ್ಳು ದೂರನ್ನು ಸಲ್ಲಿಸಿರುತ್ತೇನೆಂದರೆ ಸರಿಯಲ್ಲ.

6) ಅರೋಪಿಯೂ ಕಿರುಗಾವಲು ಮತ್ತು ಹಿಟ್ಟನಹಳ್ಳಿ ಕೊಪ್ಪಲಿನ ಶುಗರ್ ಕಾರ್ಖಾನೆಯ ಕಛೇರಿಗಳಿಗೆ 2022 ರಲ್ಲಿ ಫೀಲ್ಡ ಮ್ಯಾನ್ ಅಗಿ ಕೆಲಸ ಮಾಡುತ್ತಿದ್ದರು ಎಂದರೆ ಅದರ ಜೊತೆಗೆ ಕೆ ಎಂ

ದೊಡ್ಡಿ ಕಾರ್ಖಾನೆಯಲ್ಲಿಯೂ ಸಹ ಕೆಲಸ ಮಾಡುತ್ತಿದ್ದರು. ಕಿರುಗಾವಲಿನಲ್ಲಿ ಚಾಮ್ ಶುಗರ್ ಕಛೇರಿ ಇದೆ ಎಂದರೆ ಸರಿ. 2022 ರಲ್ಲಿ ಸದರಿ ಕಛೇರಿಯ ಉಸ್ತುವಾರಿಯನ್ನು ಅರೋಪಿಗೆ ವಹಿಸಿದ್ದರು ಎಂದರೆ ಸರಿಯಲ್ಲ. ನಾನು ಚೀಟಿ ವ್ಯವಹಾರ ಮಾಡುತ್ತಿದ್ದು, ಚೀಟಿಯನ್ನು ಹಾಕುವಂತೆ ನಾನು ಹಲವು ಬಾರಿ ಅರೋಪಿಯನ್ನು ಬೇಟಿ ಮಾಡಿ ಹೇಳಿದ್ದೆ ಎಂದರೆ ಸರಿಯಲ್ಲ. 2 ಲಕ್ಷ ರೂಪಾಯಿಗಳಿಗೆ ಚೀಟಿ ಹಾಕುವಂತೆ ಒತ್ತಾಯ ಮಾಡಿ ಅರೋಪಿಯು ಚೀಟಿ ಹಾಕುವಂತೆ ಮಾಡಿದ್ದೆ ಎಂದರೆ ಸರಿಯಲ್ಲ. ನಾನು ಪ್ರತಿದಿನ ಅವರ ಕಛೇರಿಗೆ ಹೋಗಿ ಚೀಟಿ ಮೊತ್ತವನ್ನು ವಸೂಲಿ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ಈ ತಿಂಗಳ ಚೀಟಿ ಮೊತ್ತ ನಿಮಗೆ ಅಗಿದೆ ಎಂದು ಅರೋಪಿಗೆ ಹೇಳಿ ಅವರಿಂದ ಪ್ರೊನೋಟ್ ಮತ್ತು ಚೆಕ್ಕನ್ನು ಪಡೆದಿದ್ದೆ ಎಂದರೆ ಸರಿಯಲ್ಲ. ಅವರು ಚೀಟಿಯ ಲೆಕ್ಕವನ್ನು ಮತ್ತು ಸದಸ್ಯರ ಸಂಖ್ಯೆಯನ್ನು ಕೇಳಿದಾಗ ನಾನು ಮಾಹಿತಿ ನೀಡದೇ ಮುಂದೂಡುತ್ತ ಬಂದಿದ್ದೆ ಎಂದರೆ ಸರಿಯಲ್ಲ. ಚೀಟಿ ವ್ಯವಹಾರ ಮುಕ್ತಾಯವಾದ ನಂತರ ಅರೋಪಿಯು ನನ್ನನ್ನು ಬೇಟಿ ಮಾಡಿ ಪ್ರೊನೋಟ್ ಮತ್ತು ಚೆಕ್ಕನ್ನು ವಾಪಸ್ಸು ನೀಡುವಂತೆ ಕೇಳಿದ್ದರು ಎಂದರೆ ಸರಿಯಲ್ಲ. ಚೀಟಿ ವ್ಯವಹಾರವು 2021 ರಲ್ಲಿಯೇ ಮುಕ್ತಾಯವಾಗಿತ್ತು ಎಂದರೆ ಸರಿಯಲ್ಲ. ನಾನು ಚೀಟಿಯ ಸಂಬಂದವಾಗಿ ಯಾವುದೇ ದಾಖಲೆಯನ್ನು ಅರೋಪಿಗೆ ಬರೆದುಕೊಡದ ಕಾರಣ ಅರೋಪಿಯು ನೀಡಿದ್ದ ಚೆಕ್ಕು ಮತ್ತು ಪ್ರೊನೋಟನ್ನು ದುರುಪಯೋಗ ಪಡಿಸಿಕೊಂಡು ಸುಳ್ಳು ದೂರು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಚೀಟಿಯ ಭದ್ರತೆಗೆ ನೀಡಿದ ದಾಖಲೆಗಳ ಸಂಬಂದವಾಗಿ ಅರೋಪಿಗ ಸುಳ್ಳು ಅಶ್ವಾಸನೆ ನೀಡಿದ್ದೆ ಎಂದರೆ ಸರಿಯಲ್ಲ. ಅರೋಪಿಯು ನನ್ನ ಮಾತನ್ನು ನಂಬಿ ಸುಮ್ಮನಿದ್ದು ನಾನು ನೋಟೀಸು ನೀಡಿದ್ದ ನಂತರ ನೋಟೀಸಿನ ಜೊತೆಗೆ ನನ್ನನ್ನು ಬೇಟಿ ಮಾಡಿದ್ದರು ಎಂದರೆ ಸರಿಯಲ್ಲ. ನಾನು ಪ್ರಕರಣವನ್ನು ದಾಖಲು ಮಾಡುವುದಿಲ್ಲವೆಂದು ಚೆಕ್ಕು ಮತ್ತು ಎರಡು ಪ್ರೊನೋಟುಗಳನ್ನು ವಾಪಸ್ಸು ನೀಡುವುದಾಗಿ ಹೇಳಿದ್ದೆ ಎಂದರೆ ಸರಿಯಲ್ಲ. ನಾನು ಆ ರೀತಿ ಹೇಳಿ ಈ ಸುಳ್ಳು ದೂರನ್ನು ಸಲ್ಲಿಸಿದ್ದೆ ಎಂದರೆ ಸರಿಯಲ್ಲ. ಆ ಕಾರಣದಿಂದ ಅರೋಪಿಯು ನನಗೆ ಪ್ರತ್ಯುತ್ತರ ನೋಟೀಸು ನೀಡಿಲ್ಲ ಎಂದರೆ ಸರಿಯಲ್ಲ.

7) ಈ ಪ್ರಕರಣ ದಾಖಲು ಮಾಡಿ ಹಣವನ್ನು ವಸೂಲಿ ಮಾಡಲು ಅಗಿಲ್ಲವೆಂದು ನಾನು ನಮ್ಮ ಗ್ರಾಮದ ಕಾಂತರಾಜುರವರ ಮೂಲಕ ಮತ್ತೊಂದು ಚೆಕ್ಕಿಗೆ ಸಂಬಂದವಾಗಿ ನೋಟೀಸನ್ನು ಅರೋಪಿಗೆ ನೀಡಿರುತ್ತೇನೆಂದರೆ ಸರಿಯಲ್ಲ. ನಮ್ಮ ಗ್ರಾಮದಲ್ಲಿ ಕಾಂತರಾಜು ಎಂಬ ಹೆಸರಿನವರು 4 ಜನ ಇರುತ್ತಾರೆ. ಅರೋಪಿಗೆ ನೋಟೀಸು ನೀಡಿರುತ್ತಾರೆ ಎಂದು ಹೇಳುವ ಕಾಂತರಾಜು ಯಾರು ಎಂದು ಗೊತ್ತಿರುವುದಿಲ್ಲ. ನನ್ನ ಬಳಿ ಇದ್ದ ಚೆಕ್ಕನ್ನು ಕಾಂತರಾಜುವಿಗೆ ನೀಡಿ ನೋಟೀಸನ್ನು ಕೊಡಿಸಿದ್ದು, ಅರೋಪಿಯು ವಿವರವಾದ ಪ್ರತ್ಯುತ್ತರವನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ನೋಟೀಸನ್ನು 5 ಲಕ್ಷ ರೂಪಾಯಿಗೆ

ಸಂಬಂದವಾಗಿ ನೀಡಲಾಗಿದೆ ಎಂದರೆ ಗೊತ್ತಿರುವುದಿಲ್ಲ. ನಾನು ಪುಟ್ಟರಾಜು ಎಂಬುವವರ ಮೂಲಕ ಪ್ರಾಮಿಸರಿ ಪತ್ರದ ಸಂಬಂದವಾಗಿ ದಾವೆ  ಸಲ್ಲಿಸಲು ತಯಾರು ಮಾಡಿರುತ್ತೇನೆ ಎಂದರೆ ಸರಿಯಲ್ಲ. 2021 ರಲ್ಲಿ ಚೀಟಿ ಭದ್ರತೆ ಗೆ ನೀಡಿದ ದಾಖಲೆಗಳನ್ನು ದುರುಪಯೋಗಪಡಿಸಿಕೊಂಡು ನಾನು ಮತ್ತು ಮೇಲೆ ಹೇಳಿದ ವ್ಯಕ್ತಿಗಳ  ಮೂಲಕ ಸುಳ್ಳು ಪ್ರಕರಣಗಳನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಅರೋಪಿಗೆ ಸಾಲ ಪಡೆದು ಜೀವನ ನಡೆಸುವ ಪ್ರಮೇಯ ಇಲ್ಲ ಎಂದರೆ ಸರಿಯಲ್ಲ.  ಅರೋಪಿಯು ಕೈತುಂಬ ವೇತನ ಪಡೆಯುತ್ತಿದ್ದು, ಸದರಿ ವಿಚಾರ ನನಗೆ ಗೊತ್ತಿದ್ದರೂ ಸಹ ಸುಳ್ಳು ದೂರನ್ನು ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ಪಡಿತರ ಚೀಟಿಯನ್ನು ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ. ನನ್ನ ಮತ್ತು ಅರೋಪಿಯ ನಡುವೆ ಹಣದ ವ್ಯವಹಾರ ನಡೆಯದೇ ಇದ್ದರು ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿ ಸುಳ್ಳು ದೂರು ಸಲ್ಲಿಸಿ ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ ಮಳವಳ್ಳಿ